ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-EXAM0EAP/1/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದಿನಾಂಕ:03.04.2025

**ಸುತ್ತೋಲೆ**

ವಿಷಯ: ವಿದ್ಯಾರ್ಥಿಗಳ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು (ಸಿ-20 ಪಠ್ಯಕ್ರಮ) ವಿತರಿಸುವ ಸಂಬಂಧ ಮಾರ್ಗಸೂಚಿಗಳನ್ನು ಪ್ರಾಂಶುಪಾಲರುಗಳಿಗೆ ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ವಿದ್ಯಾರ್ಥಿಗಳ ಮೂಲ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು (ಸಿ-20 ಪಠ್ಯಕ್ರಮ) ಹಂತ ಹಂತವಾಗಿ ಸಂಸ್ಥೆಗಳಿಗೆ ರವಾನಿಸಲಾಗುತ್ತಿದ್ದು, ಪ್ರತಿ ಡಿಪ್ಲೋಮಾ ಪ್ರಮಾಣ ಪತ್ರದ (Diploma Certificate) ಬಲತುದಿಯ ಮೇಲ್ಭಾಗದಲ್ಲಿ ನಿಗದಿಪಡಿಸಲಾದ ಬಾಕ್ಸ್‌ನಲ್ಲಿ ಹೊಂದಿಕೆಯಾಗುವಂತೆ ಸಂಬಂಧಪಟ್ಟ ವಿದ್ಯಾರ್ಥಿಯ ಇತ್ತೀಚಿನ ಪಾಸ್ ಪೋರ್ಟ್ ಭಾವಚಿತ್ರವನ್ನು ಅಂಟಿಸಲು (Affix Recent Passport Size colour photo) ಹಾಗೂ ಭಾವಚಿತ್ರದ ಕೆಳಭಾಗದಲ್ಲಿ ಈ ಪತ್ರದೊಂದಿಗೆ ಲಗತ್ತಿಸಲಾದ ಮಾದರಿಯ ಆಧಾರದಲ್ಲಿ ಸಂಸ್ಥೆಯ ವೃತ್ತಾಕಾರದ ಮೊಹರನ್ನು ಹಾಕಿ (Round Seal) ಪ್ರಾಂಶುಪಾಲರು ಮೇಲು ರುಜು ಮಾಡಿ, ಕಡ್ಡಾಯವಾಗಿ ಕೆಳಕಂಡ ಮಾರ್ಗಸೂಚಿಗಳನ್ವಯ ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

1) ಸಂಸ್ಥೆಯ ಸಂಕ್ಷಿಪ್ತ ವಿಳಾಸವುಳ್ಳ ಆಂಗ್ಲಭಾಷೆಯ (Name of the Institution - Inst code, place) 30 mm ವ್ಯಾಸವುಳ್ಳ ವೃತ್ತಾಕಾರದ ಹೊಸ ರಬ್ಬರ್ ಸ್ಟ್ಯಾಂಪ್ ಮೊಹರನ್ನು (Round Seal) ಮಾಡಿಸುವುದು.(ಮಾದರಿ ಲಗತ್ತಿಸಿದೆ)
2) ಸಿ-20 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಮೂಲ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ಪ್ರತ್ಯೇಕವಾದ ವಹಿಯನ್ನು (RR No. & ದೃಢೀಕರಣ) ನಿಯಮಾನುಸಾರ ನಿರ್ವಹಿಸುವುದು.
3) ಸದರಿ ಡಿಪ್ಲೋಮಾ ಪ್ರಮಾಣ ಪತ್ರಗಳ ವಿತರಣಾ ವಹಿಯಲ್ಲಿ (ಅನುಬಂಧದ ನಮೂನೆಯಂತೆ) ಪೂರ್ಣ ವಿವರಗಳನ್ನು ಭರ್ತಿ ಮಾಡಿದ ನಂತರ ಕಾಲಂ (6) ರಲ್ಲಿ ವಿದ್ಯಾರ್ಥಿಯ ಒಂದೇ ರೀತಿಯ (Indentical) ಭಾವಚಿತ್ರವನ್ನು ಅಂಟಿಸಿ ಸದರಿ ಭಾವಚಿತ್ರದ ಮೇಲೆ ಕೂಡ ಪ್ರಾಂಶುಪಾಲರು ಮೊಹರಿನೊಂದಿಗೆ ಸಹಿ ಮಾಡುವುದು ಹಾಗೂ ಕಾಲಂ (8) ರಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಯ ಸಹಿಯನ್ನು ದಿನಾಂಕ ಸಹಿತ ಪಡೆಯುವುದು.
4) ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸ್ವೀಕರಿಸಲಾದ ಒಟ್ಟು ಡಿಪ್ಲೋಮಾ ಪ್ರಮಾಣ ಪತ್ರಗಳ ಸಂಖ್ಯೆಯನ್ನು ಸಂಬಂಧಪಟ್ಟ ವಹಿಯಲ್ಲಿ (Register) ಆಯಾ ದಿನಾಂಕದಲ್ಲಿ ಕ್ರಮ ಸಂಖ್ಯೆ ಸಹಿತ ( ಇಂದ.......ವರೆಗೆ) ನಮೂದಿಸುವುದು ಮತ್ತು ವಿತರಣೆಯಾಗಿರುವ ಸಂಖ್ಯೆ & ಸಂಸ್ಥೆಯಲ್ಲಿ ವಿತರಣೆಯಾಗದೆ ಉಳಿದಿರುವ ಸಂಖ್ಯೆಗಳನ್ನು (Physical Stock with book stock) ವಹಿಯಲ್ಲಿ ಮುಂದುವರಿಸುವುದು.
5) ಪರೀಕ್ಷೆ ವೇಳೆ ವಹಿಗಳನ್ನು ಬಾಹ್ಯ ಸಂಸ್ಥೆಯಿಂದ ನಿಯೋಜನೆಗೊಂಡ ಆಂತರಿಕ ಅಂಕಗಳ ಪರಿವೀಕ್ಷಕರು/ಮುಖ್ಯ ವೀಕ್ಷಕರಿಗೆ ಪರಿಶೀಲನೆಗಾಗಿ ಮಂಡಿಸುವುದು. ಸದರಿ ಅಧಿಕಾರಿ ಪರಿಶೀಲಿಸಿ ವಹಿಯಲ್ಲಿ ಸೂಕ್ತ ಷರಾದೊಂದಿಗೆ ಮೇಲು ರುಜು ಮಾಡುವುದು.

ಮುಂದುವರೆದು, ವಿದ್ಯಾರ್ಥಿಗಳಿಗೆ ಮೂಲ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ಮೇಲ್ಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು, ಇಲ್ಲವಾದಲ್ಲಿ ಸಂಬಂಧಪಟ್ಟ ಪರೀಕ್ಷಾ ಕಾರ್ಯನಿರ್ವಹಕರು, ಅಧೀಕ್ಷಕರು ಮತ್ತು ಸಂಸ್ಥೆಯ ಪಾಂಶುಪಾಲರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸೂಚಿಸಲಾಗಿದೆ.

Digitally signed by
Prasanna H
Date: 04-04-2025
17:46:18
ತಾಂತ್ರಿಕ ಶಿಕ್ಷಣ ಇಲಾಖೆ

ಅಡಕ: 1) ಪ್ರಮಾಣ ಪತ್ರದಲ್ಲಿ ಮೇಲು ರುಜು ಮಾಡುವ ಮಾದರಿಯ ಪ್ರತಿ.
2)ಮೂಲ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ವಿತರಿಸುವ ವಹಿಯ ಮಾದರಿ ಮತ್ತು ಮೊಹರಿನ ಮಾದರಿ

ಇವರಿಗೆ:
ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1) ಕಾರ್ಯದರ್ಶಿಯವರ ಆಪ್ತ ಶಾಖೆ.
2) ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
3) ಆಂತರಿಕ ಅಂಕಗಳ ಪರಿವೀಕ್ಷಕರು/ಮುಖ್ಯ ವೀಕ್ಷಕರು- ಸಂಬಂಧಪಟ್ಟ ಪ್ರಾಂಶುಪಾಲರ ಮುಖಾಂತರ


Scanned with OKEN Scanner

ಕರ್ನಾಟಕ ಸರ್ಕಾರ

**GOVERNMENT OF KARNATAKA**

ತಾಂತ್ರಿಕ ಶಿಕ್ಷಣ ಇಲಾಖೆ

**DEPARTMENT OF TECHNICAL EDUCATION**



# ತಾಂತ್ರಿಕ ಪರೀಕ್ಷಾ ಮಂಡಳಿ

**BOARD OF TECHNICAL EXAMINATIONS**

ಡಿಪ್ಲೊಮಾ ಪ್ರಮಾಣ ಪತ್ರ

## DIPLOMA CERTIFICATE

*This Diploma in*

**ELECTRICAL AND ELECTRONICS ENGINEERING**

*is awarded to*

*who has Undergone the prescribed course of study in the above discipline and passed in*

Specimen Copy

ಕಾರ್ಯದರ್ಶಿ / *Secretary*

ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು

*Board of Technical Examinations, Bengaluru*

ಅಧ್ಯಕ್ಷರು / Chairman

ತಾಂತ್ರಿಕ ಪರೀಕ್ಷಾ ಮಂಡಳಿ ಮತ್ತು

ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

*Board of Technical Examinations and Commissioner, Department of Technical Education Bengaluru*

Scanned with OKEN Scanner

ಪುಟ ಸಂಖ್ಯೆ:

RR.No.

## ಮೂಲ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ವಿತರಿಸುವ ವಹಿಯ ಮಾದರಿ

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ನೋಂದಣಿ ಸಂಖ್ಯೆ | ವಿಭಾಗ | ಡಿಪ್ಲೋಮಾ ಪ್ರಮಾಣ ಪತ್ರದ ಕ್ರ.ಸಂ | ವಿದ್ಯಾರ್ಥಿಯ ಭಾವಚಿತ್ರ ಮೊಹರು & ಪ್ರಾಂಶುಪಾಲರ ಸಹಿಯೊಂದಿಗೆ | ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ | ವಿದ್ಯಾರ್ಥಿಯ ಪೂರ್ಣ ಸಹಿ ಮತ್ತು ಪ್ರಮಾಣ ಪತ್ರ ಸ್ವೀಕರಿಸಿದ ದಿನಾಂಕ |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |

ಪರೀಕ್ಷಾ ವಿಭಾಗದ
ಕಾರ್ಯನಿರ್ವಹಕರ ಸಹಿ

ಪರೀಕ್ಷಾ ವಿಭಾಗದ
ಅಧೀಕ್ಷರ ಸಹಿ

ಪರೀಕ್ಷಾ ವಿಭಾಗದ
ರಿಜಿಸ್ಟ್ರಾರ್ ಸಹಿ

ವಿಭಾಗದ ಮುಖ್ಯಸ್ಥರ ಸಹಿ(HOD)

ಪ್ರಾಂಶುಪಾಲರ ಸಹಿ

Scanned with OKEN Scanner

ಸಂಸ್ಥೆಯ ಸಂಕ್ಷಿಪ್ತ ವಿಳಾಸವುಳ್ಳ ಆಂಗ್ಲ ಭಾಷೆಯ (Name of the Institution - Inst code, place) **30 mm ವ್ಯಾಸವುಳ್ಳ**

ವೃತ್ತಾಕಾರದ ಹೊಸ ರಬ್ಬರ್ ಸ್ಟ್ಯಾಂಪ್ ಮೊಹರಿನ ಮಾದರಿ




Scanned with OKEN Scanner